ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015–16 ದಿನಾಂಕ: 7–11–2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಕರ್ನಾಟಕ ಲಲಿತಕಲಾ ಅಕಾಡೆಮಿ ಅಂತರಜಾಲತಾಣ (ವೆಬ್‌ಸೈಟ್) ಲೋಕಾರ್ಪಣೆ ಹಾಗೂ ಕಲಾವಿದರಿಗೆ ಗುರುತಿನ ಚೀಟಿ ಪ್ರದಾನ<br><br>ಅಂತರಜಾಲತಾಣ ಲೋಕಾರ್ಪಣೆ ಮತ್ತು ಗುರುತಿನ ಚೀಟಿ ಪ್ರದಾನ:<br><br>ಕೆ.ಎ. ದಯಾನಂದ,<br>ನಿರ್ದೇಶಕರು,<br>ಕನ್ನಡ ಮತ್ತು ಸಂಸ್ಕೃತಿ ಇಲಾಖೆ<br><br>ಅಧ್ಯಕ್ಷತೆ:<br><br>ಡಾ ಎಂ.ಎಸ್. ಮೂರ್ತಿ,<br>ಅಧ್ಯಕ್ಷರು<br>ಕರ್ನಾಟಕ ಲಲಿತಕಲಾ ಅಕಾಡೆಮಿ. | 09–11–2015<br>ಸೋಮವಾರ<br>ಬೆಳಿಗ್ಗೆ<br>11–30 ಗಂಟೆಗೆ | ವರ್ಣ ಗ್ಯಾಲರಿ, ಕರ್ನಾಟಕ ಲಲಿತಕಲಾ ಅಕಾಡೆಮಿ, 3ನೇ ಮಹಡಿ, ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು – 560 002 |
| 2. | ಪತ್ರಿಕಾಗೋಷ್ಠಿ:<br><br>ತೋಟಗಾರಿಕೆ ಇಲಾಖೆ ವತಿಯಿಂದ | 09–11–2015 | ತೋಟಗಾರಿಕೆ ಮಾಹಿತಿ ಕೇಂದ್ರ, ಲಾಲ್‌ಬಾಗ್, ಬೆಂಗಳೂರು |

| | | | |
|---|---|---|---|
| | "ರಾಷ್ಟ್ರೀಯ ಭೂದೃಶ್ಯ ಹಬ್ಬ" (ನ್ಯಾಷನಲ್ ಲ್ಯಾಂಡ್ ಸ್ಕೇಪ್ ಫೆಸ್ಟ್ – 2015) ಕುರಿತು ಇಲಾಖೆ ನಿರ್ದೇಶಕರಿಂದ | ಸೋಮವಾರ<br><br>ಅಪರಾಹ್ನ<br>12–00 ಗಂಟೆಗೆ | |

ನಿರ್ದೇಶಕರ ಪರವಾಗಿ

**ಪತ್ರಿಕಾ ಪ್ರಕಟಣೆ**

# ಉದ್ಯೋಗ ಆಧಾರ್ ಯೋಜನೆ : ಸರಳೀಕೃತ

ಬೆಂಗಳೂರು, ನವೆಂಬರ್ 7 (ಕರ್ನಾಟಕ ವಾರ್ತೆ)

ರಾಜ್ಯದ ಕೈಗಾರಿಕೋದ್ಯಮಿಗಳು ತಮ್ಮ ಕೈಗಾರಿಕೆಗಳನ್ನು ನೋಂದಾಯಿಸಿಕೊಳ್ಳುವ ಪ್ರಕ್ರಿಯೆಯನ್ನು ಸರಳೀಕೃತಗೊಳಿಸಿದ್ದು, ಈ ಹಿಂದೆ ಚಾಲ್ತಿಯಲ್ಲಿದ್ದ ಐಇಎಂ ಭಾಗ–1 ಮತ್ತು ಭಾಗ–2 ನ್ನು ಪಡೆಯುವ ಪದ್ಧತಿಯನ್ನು ನಿಲ್ಲಿಸಲಾಗಿದೆ. ಹೊಸದಾಗಿ ಕೈಗಾರಿಕೆಗಳನ್ನು ಪ್ರಾರಂಭಿಸಲು ಯಾವುದೇ ಅನುಮತಿ ಪಡೆದುಕೊಳ್ಳುವ ಅಗತ್ಯವಿರುವುದಿಲ್ಲ. ಈಗ ಹೊಸದಾಗಿ ಉದ್ಯೋಗ ಆಧಾರ ಯೋಜನೆ ಜಾರಿಗೆ ಬಂದಿದ್ದು, ಉದ್ದಿಮೆದಾರರು ಕೈಗಾರಿಕಾ ಘಟಕಗಳನ್ನು ಸ್ಥಾಪಿಸಿ ಉತ್ಪಾದನೆ/ಚಟುವಟಿಕೆಯನ್ನು ಪ್ರಾರಂಭಿಸಿದ ನಂತರ, ಅವರೇ ನೇರವಾಗಿ ಅಂತರ್ಜಾಲ ಸಂಪರ್ಕದಿಂದ ತಮ್ಮ ಸ್ಥಳದಲ್ಲಿಯೇ ಕೈಗಾರಿಕೆಗಳನ್ನು ನೋಂದಾಯಿಸಿ ಕೊಳ್ಳಬಹುದಾಗಿದೆ. ಸರಳೀಕೃತ ಅರ್ಜಿಯಲ್ಲಿ ಆಧಾರ್ ಕಾರ್ಡ್ ಸಂಖ್ಯೆ ಹಾಗೂ ಬ್ಯಾಂಕ್ ಖಾತೆಯ ವಿವರಗಳನ್ನು ಅರ್ಜಿಯಲ್ಲಿ ನಮೂದಿಸಬೇಕಾಗಿರುತ್ತದೆ.

ಭರ್ತಿಮಾಡುವ ಅರ್ಜಿ ನಮೂನೆಯ ವಿವರಗಳು ಅತ್ಯಂತ ಸರಳವಾಗಿದ್ದು, ಉದ್ಯಮಿ ಸ್ನೇಹಿಯಾಗಿರುತ್ತದೆ. ನೋಂದಾಯಿತ ಜ್ಞಾಪನಾ ಪತ್ರವನ್ನು ಕೈಗಾರಿಕೋದ್ಯಮಿಗಳು ಆನ್‌ಲೈನ್ ಮುಖಾಂತರ ಅರ್ಜಿ ನಮೂನೆ ಭರ್ತಿಮಾಡಿ, ತಮ್ಮ ಸ್ಥಳದಲ್ಲಿಯೇ ಮುದ್ರಣ ಪ್ರತಿಯನ್ನು ಪಡೆದು ತಮ್ಮ ವಿವಿಧ ಕಾರ್ಯಗಳಿಗೆ ಉಪಯೋಗಿಸಬಹುದಾಗಿದೆ. ಅರ್ಜಿ ನಮೂನೆ ಹಾಗೂ ಇತರೆ ವಿವರಗಳು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ವೆಬ್‌ಸೈಟ್ www.investkarnataka.gov.in ನಲ್ಲಿ ಲಭ್ಯವಿರುತ್ತದೆ. ಅಂತರ್ಜಾಲ ಸಂಪರ್ಕದ ಅನುಕೂಲ ಹೊಂದಿರದೆ ಇರುವ ಕೈಗಾರಿಕೋದ್ಯಮಿಗಳು, ತಮ್ಮ ಜಿಲ್ಲೆಗೆ ಸಂಬಂಧಿಸಿದ ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಸಂಪರ್ಕಿಸಿ, ಜ್ಞಾಪನಾ ಪತ್ರಗಳ ನೋಂದಣಿ ಮಾಡಿಸಿಕೊಳ್ಳಬಹುದಾಗಿದೆ.

ಕೈಗಾರಿಕೋದ್ಯಮಿಗಳು ಇದರ ಸದುಪಯೋಗ ಪಡೆದುಕೊಳ್ಳಲು ಸಣ್ಣ ಕೈಗಾರಿಕಾ ಸಚಿವ ಸತೀಶ್ ಜಾರಕಿಹೊಳಿ ಅವರು ತಿಳಿಸಿದ್ದಾರೆ.

ಕವನ:ಬಾಬು:ಜಿಪಿಆರ್.

## "ದೀಪೋತ್ಸವವನ್ನು ಜೈವಿಕ ಇಂಧನದಿಂದ ಬೆಳಗಿಸಿ"

ಬೆಂಗಳೂರು, ನವೆಂಬರ್ 7 (ಕರ್ನಾಟಕ ವಾರ್ತೆ)

ಜೈವಿಕ ಇಂಧನ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗಿಯಾಗಿರುವ ಎಲ್ಲಾ ಸಾರ್ವಜನಿಕರು, ರೈತರು, ಮಹಿಳೆಯರು, ವಿದ್ಯಾರ್ಥಿಗಳಿಗೆ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಿಂದ ದೀಪದ ಹಬ್ಬ ದೀಪಾವಳಿಯ ಹಾರ್ದಿಕ ಶುಭಾಶಯಗಳು. ಈ ಬೆಳಕಿನ ಹಬ್ಬ ಜನತೆಗೆ ಜೈವಿಕ ಇಂಧನ ಹಾಗೂ ಬಳಕೆ ಕುರಿತು ಹೆಚ್ಚು ಜಾಗೃತಿ ಮೂಡಿಸಲಿ.

ಈ ತಿಂಗಳು ಅಂದರೆ ಕಾರ್ತಿಕ ಮಾಸದಲ್ಲಿ ಆಚರಿಸಲಾಗುವ ದೀಪದ ಹಬ್ಬಗಳಲ್ಲಿ ದೀಪೋತ್ಸವ ಕಾರ್ಯಕ್ರಮಗಳು ನಡಿನಾದ್ಯಂತ ನಡೆಯಲಿವೆ. ರಾಜ್ಯದ ಎಲ್ಲಾ ಮನೆಗಳಲ್ಲಿ, ದೇಗುಲಗಳಲ್ಲಿ ದೀಪ ಬೆಳಗಿಸುವುದು, ಲಕ್ಷದೀಪೋತ್ಸವ ಮೊದಲಾದ ಧಾರ್ಮಿಕ ಆಚರಣೆಗಳು ಸಾಂಪ್ರದಾಯಿಕವಾಗಿ ಆಚರಿಸಿಕೊಂಡು ಬರುತ್ತಿರುವುದು ತಮಗೆಲ್ಲರಿಗೂ ತಿಳಿದ ವಿಷಯ.

ಈ ಸುಸಂದರ್ಭದಲ್ಲಿ ಎಲ್ಲಾ ದೀಪಗಳಲ್ಲಿ ಅಖಾದ್ಯ ತೈಲಬೀಜಗಳಾದ ಹೊಂಗೆ, ಬೇವು, ಹಿಪ್ಪೆ, ಸಿಮರೂಬ, ಹರಳು ಇತ್ಯಾದಿಗಳಿಂದ ದೊರಕುವ ಎಣ್ಣೆಯನ್ನು ಉಪಯೋಗಿಸಿ ದೀಪಾವಳಿ ಹಬ್ಬವನ್ನು ಆಚರಿಸಲು ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಸ್. ಆರ್. ಪಾಟೀಲ್(ಬ್ಯಾಡಗಿ) ಅವರು ಜನತೆಯಲ್ಲಿ ಮನವಿ ಮಾಡಿದ್ದಾರೆ.

ಅಖಾದ್ಯ ಬೀಜಗಳ ತೈಲವನ್ನು ಬಳಸುವುದರಿಂದ ಖಾದ್ಯ ತೈಲಗಳ ಬಳಕೆ ಮತ್ತು ಆಮದು ಪ್ರಮಾಣವನ್ನು ಮಿತಗೊಳಿಸಬಹುದಾಗಿದೆ. ಅಖಾದ್ಯ ತೈಲಬೀಜಗಳು ಮರಗಳಿಂದ ದೊರೆಯುವುದರಿಂದ ಪ್ರಕೃತಿಯಲ್ಲಿ ಜೀವ ವೈವಿಧ್ಯತೆ, ಪರಿಸರ ಸಮತೋಲಗಳು ವೃದ್ಧಿಯಾಗುವುದರ ಜೊತೆಗೆ ರೈತರು ಮತ್ತು ಕೂಲಿಕಾರರ ಆದಾಯವನ್ನು ಹೆಚ್ಚಿಸುವಲ್ಲಿ ನೆರವಾಗುವುದು. ಈ ನಿಟ್ಟಿನಲ್ಲಿ ಹೆಚ್ಚು ಹೆಚ್ಚು ಅಖಾದ್ಯ ತೈಲವನ್ನು ಬಳಸಬೇಕೆಂದು ಕೋರುತ್ತಾ ಮತ್ತೊಮ್ಮೆ ರಾಜ್ಯದ ಜನತೆಗೆ ದೀಪಾವಳಿಯ ಹಾರ್ದಿಕ ಶುಭ ಕಾಮನೆಗಳನ್ನು ಕೋರಿರುತ್ತಾರೆ.

ಕವನ:ಬಾಬು:ಜಿಪಿಆರ್.

## ಮೈಸೂರು ಹುಲಿ ಹಜರತ್ ಟಿಪ್ಪುಸುಲ್ತಾನರ ಜಯಂತಿ

ಬೆಂಗಳೂರು, ನವೆಂಬರ್ 7 (ಕರ್ನಾಟಕ ವಾರ್ತೆ)

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಲ್ಪಸಂಖ್ಯಾತರ ನಿರ್ದೇಶನಾಲಯದ ವತಿಯಿಂದ ನವೆಂಬರ್ 10 ರಂದು ಬೆಳಿಗ್ಗೆ 11-00 ವಿಧಾನಸೌಧ ಬ್ಯಾಂಕ್ವೆಟ್ ಹಾಲ್ ನಲ್ಲಿ ಮೈಸೂರು ಹುಲಿ ಹಜರತ್ ಟಿಪ್ಪು ಸುಲ್ತಾನರ ಜಯಂತಿಯನ್ನು ಹಮ್ಮಿಕೊಂಡಿದೆ.

ಈ ಕಾರ್ಯಕ್ರಮದ ಉದ್ಘಾಟನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೆರವೇರಿಸಲಿದ್ದಾರೆ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ, ಮೂಲಸೌಲಭ್ಯ ಅಭಿವೃದ್ಧಿ ಮತ್ತು ಹಜ್ ಸಚಿವರಾದ ಆರ್. ರೋಷನ್ ಬೇಗ್ ಅವರು ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಅಲ್ಪಸಂಖ್ಯಾತರ ಕಲ್ಯಾಣ, ವಕ್ಫ್ ಸಾರ್ವಜನಿಕ ಉದ್ದಿಮೆ ಹಾಗೂ ಪೌರಾಡಳಿತ ಇಲಾಖೆಯ ಸಚಿವ ಖಮರುಲ್ ಇಸ್ಲಾಂ ಅವರು ಪ್ರಾಸ್ತಾವಿಕ ನುಡಿಯನ್ನಾಡಲಿದ್ದಾರೆ.

ಸಮಾರಂಭದಲ್ಲಿ ಕೇಂದ್ರದ ಕಾನೂನು ಸಚಿವ ಡಿ. ವಿ. ಸದಾನಂದಗೌಡ, ಕೇಂದ್ರದ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಅನಂತ ಕುಮಾರ್, ಕೇಂದ್ರದ ನಗರಾಭಿವೃದ್ಧಿ ವಸತಿ ಮತ್ತು ನಗರ ಬಡತನ ನಿರ್ಮೂಲನಾ ಸಚಿವ ಎಂ. ವೆಂಕಯ್ಯನಾಯ್ಡು, ಕೇಂದ್ರ ಬೃಹತ್ ಕೈಗಾರಿಕಾ ಹಾಗೂ ಸಾರ್ವಜನಿಕ ಉದ್ದಿಮೆ ರಾಜ್ಯ ಸಚಿವ ಜಿ.ಎಂ. ಸಿದ್ದೇಶ್ವರ್, ರಾಜ್ಯ ಸಚಿವ ಸಂಪುಟದ ಸದಸ್ಯರು, ವಿಧಾನ ಪರಿಷತ್ ಸಭಾಪತಿ ಡಿ.ಹೆಚ್. ಶಂಕರಮೂರ್ತಿ ಅವರು ಸೇರಿದಂತೆ ಹಲವು ಗಣ್ಯರು ಪಾಲ್ಗೊಳ್ಳುವರು.

ಕವನ:ಜಿಪಿಆರ್.

## ರಾಜ್ಯದ ವಿವಿಧ ಭಾಗಗಳಲ್ಲಿ ಜವಳಿ ಪಾರ್ಕ್‌ಗಳ ನಿರ್ಮಾಣಕ್ಕೆ ಕ್ರಮ : ಬಾಬುರಾವ್ ಚಿಂಚನಸೂರು

ಬೆಂಗಳೂರು, ನವೆಂಬರ್ 7 (ಕರ್ನಾಟಕ ವಾರ್ತೆ)

ರಾಜ್ಯದ ವಿವಿಧ ಭಾಗಗಗಳಲ್ಲಿ ಸುಮಾರು 2,500 ಎಕರೆ ಪ್ರದೇಶಗಳಲ್ಲಿ ಜವಳಿ ಪಾರ್ಕ್‌ಗಳನ್ನು ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದು ಜವಳಿ ಹಾಗೂ ಬಂದರು ಸಚಿವರಾದ ಬಾಬುರಾವ್ ಚಿಂಚನಸೂರು ಅವರು ತಿಳಿಸಿದರು.

ವಿಧಾನಸೌಧದಲ್ಲಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು ಹಲವು ಪ್ರತಿಷ್ಠಿತ ಕಂಪನಿಗಳು ಜವಳಿ ಪಾರ್ಕ್ ನಿರ್ಮಾಣಕ್ಕೆ ಮುಂದೆ ಬಂದಿದ್ದು, ಸುಮಾರು 10 ಸಾವಿರ ಕೋಟಿ ರೂ. ಬಂಡವಾಳ ಹೂಡಿಕೆ ಮಾಡುವ ನಿರೀಕ್ಷೆ ಇದೆ. ಅಲ್ಲದೆ, ರಾಜ್ಯ ಗ್ರಾಮೀಣ ಭಾಗದ 5 ಲಕ್ಷ ನಿರುದ್ಯೋಗಿ ಯುವಕ ಯುವತಿಯರಿಗೆ

ಉದ್ಯೋಗ  ದೊರಕಲಿದೆ ಎಂದ ಸಚಿವರು ಕರ್ನಾಟಕ ನೂತನ ಜವಳಿ ನೀತಿಯ ಅವಧಿಗೆ ಒಂದು ಸಾವಿರ ಕೋಟಿ ರೂ ಅನುದಾನ ನೀಡಲು ಸರ್ಕಾರ ಅನುಮೋದನೆ  ನೀಡಿದೆ ಎಂದರು.

ಕಲ್ಬುರ್ಗಿ ಜಿಲ್ಲೆಯ ಗುರುಮಿಟಕಲ್‌ನಲ್ಲಿ 10 ಕೋಟಿ ರೂ ವೆಚ್ಚದಲ್ಲಿ ಎರಡು ಎಕರೆ ಪ್ರದೇಶದಲ್ಲಿ ಪವರ್‌ಲೂಮ್ ಪಾರ್ಕ್‌ನ್ನು ರಾಜ್ಯ ಜವಳಿ ಮೂಲ ಸೌಲಭ್ಯಗಳ ಅಭಿವೃದ್ಧಿ ನಿಗಮದ ವತಿಯಿಂದ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ ಎಂದ ಬಾಬುರಾವ್ ಚಿಂಚನಸೂರು ಅವರು 2015-16 ನೇ ಸಾಲಿನಲ್ಲಿ ಚಾಮರಾಜನಗರ, ಶಿರಾ ಹಾಗೂ ಬಳ್ಳಾರಿ ಜಿಲ್ಲೆಯ ಕಡುತಿನಿಯಲ್ಲಿ ತಲಾ 50 ಎಕರೆ ಪ್ರದೇಶದಲ್ಲಿ ಮೆಗಾ ಜವಳೀ ಪಾರ್ಕ್ ಸ್ಥಾಪಿಸಲು ಕ್ರಮವಹಿಸಲಾಗಿದೆ ಎಂದು ತಿಳಿಸಿದರು.

ಯಾದಗಿರಿಯಲ್ಲಿ 10 ಕೋಟಿ ರೂ ವೆಚ್ಚದಲ್ಲಿ ಹೈಟೆಕ್ ಟೆಕ್ಸ್‌ಟೈಲ್ ತರಬೇತಿ ಕೇಂದ್ರ ಸ್ಥಾಪನೆಗೆ ಈಗಾಗಲೇ ಶಂಕುಸ್ಥಾಪನೆ ನೆರವೇರಿಸಲಾಗಿದೆ ಎಂದ ಬಾಬುರಾವ್ ಚಿಂಚನಸೂರು ಅವರು ಇದು ಕಾರ್ಯಾರಂಭ ಮಾಡಿದ ತಕ್ಷಣ 10 ಸಾವಿರ ಮಂದಿಗೆ ಉದ್ಯೋಗ ಲಭ್ಯವಾಗಿದೆ ಎಂದರು.

ಕರ್ನಾಟಕ ನೂತನ ಜವಳಿ ನೀತಿ ಜಾರಿಗೆ ಬಂದ ಮೇಲೆ ಈವರೆಗೆ 1,823.76 ಕೋಟಿ ಬಂಡವಾಳ ಹೂಡಿಕೆಯಾಗಿದೆ ಎಂದ ಸಚಿವರು ಸುಮಾರು 77 ಸಾವಿರ ಜನರಿಗೆ ಉದ್ಯೋಗ ಕಲ್ಪಿಸಲಾಗಿದೆ ಎಂದು ಇದೇ ಸಂದರ್ಭದಲ್ಲಿ ಜವಳಿ ಸಚಿವರು ತಿಳಿಸಿದರು.

ಕವನ:ಕೆಪಿಪಿ:ಜಿಪಿಆರ್.